# ಎಮ್ಮೆ ನಮ್ಮಯ ಹೆಮ್ಮೆ

■ ರಾಜು ಅಡಕಳ್ಳಿ
ಕಲೆ: ಗುರು ನಾವಳ್ಳಿ



ಸಾಮಾನ್ಯವಾಗಿ ಬೆಕ್ಕು, ನಾಯಿ, ಮೊಲಗಳೇ ತಮ್ಮ ಇಷ್ಟದ ಪ್ರಾಣಿಗಳು ಎಂದು ಹೇಳುವವರು ತುಂಬಾ ಮಂದಿ ಇದ್ದಾರೆ. ಆದರೆ ನನ್ನ ಇಷ್ಟದ ಪ್ರಾಣಿ ಎಮ್ಮೆ ಎಂದು ಹೇಳಿದವರನ್ನು ನನ್ನ ಆಯುಷ್ಯದಲ್ಲಿ ಒಬ್ಬರನ್ನೂ ಕಂಡಿಲ್ಲ. ಎಮ್ಮೆಯ ಹಾಲನ್ನೇ ಕುಡಿದು ದೊಡ್ಡವರಾದವರೂ ಕೂಡ ಎಮ್ಮೆ ನನ್ನಿಷ್ಟದ ಪ್ರಾಣಿ ಎಂದು ಬಹಿರಂಗವಾಗಿ ಹೇಳಲು ಇಷ್ಟಪಡದಿರುವುದು ವಿಪರ್ಯಾಸವೇ. ಆದರೆ ನನ್ನ ಪಾಲಿಗಂತೂ ಎಮ್ಮೆಯೇ ದೊಡ್ಡ ಹೆಮ್ಮೆ.

ನಾನು ಹಳ್ಳಿಯಲ್ಲಿ ಬೆಳೆದವನು. ಆಗ ನಮ್ಮ ಮನೆಯ ಕೊಟ್ಟಿಗೆಯಲ್ಲಿ ಅನೇಕ ಎಮ್ಮೆ, ಆಕಳುಗಳೂ ಇರುತ್ತಿದ್ದವು. ಹೀಗಾಗಿ ಎಮ್ಮೆಯ ಆಲಾಪಗಳನ್ನು ಕೇಳಿಕೊಂಡು, ಎಮ್ಮೆಯ ಸಹವಾಸದಲ್ಲೇ ನಾನು ಬೆಳೆದವನು. ಹಾಗೆ ನೋಡಿದರೆ ಎಮ್ಮೆ ನನ್ನ ಹೆಂಡತಿಗಿಂತಲೂ ನನಗೆ ಸೀನಿಯರ್ ಸಂಗಾತಿ.

27 ವರ್ಷ ವಯಸ್ಸಾದ ನಂತರ ನನ್ನ ಹೆಂಡತಿ ನನ್ನ ಕೈ ಹಿಡಿದಿದ್ದರೆ, ಬಾಲ್ಯದಿಂದಲೂ ನನಗೆ ದಪ್ಪ ಹಾಲು ಕುಡಿಸಿ ಬೆಳೆಸಿದ ಕೀರ್ತಿ ನನ್ನ ಆಯಿಗೆ ಮತ್ತು ಎಮ್ಮೆಗೇ ಸಲ್ಲುತ್ತದೆ. ಹಸುಗಳಿಗಿಂತ ಹೆಚ್ಚು ಹಾಲು ಕೊಟ್ಟರೂ ಎಮ್ಮೆಗಳಿಗಿಂತ ಹಸುಗಳನ್ನೇ ಹೆಚ್ಚು ಪ್ರೀತಿಯಿಂದ ಕಾಣುವ ಪಕ್ಷಪಾತತನ ನಮ್ಮಲ್ಲಿ ಹಸುಗೂಸಿನಿಂದ ಹಿಡಿದು ಮುದುಕರವರೆಗೆ ಹಿಂದಿನಿಂದಲೂ ನಡೆಯುತ್ತಾ ಬಂದಿದೆ. ಆದರೂ ಎಮ್ಮೆ ಈ ರೀತಿ ತನ್ನ ಮೇಲೆ ನಡೆಯುತ್ತಿರುವ ಶೋಷಣೆಯನ್ನು ಮೌನವಾಗಿ ನೋಡುತ್ತಾ, ಯಾವುದೇ ಜಗಳ ರಗಳೆ ತಂಟೆ ತೆಗೆಯದೇ, ತನ್ನ ಪಾಡಿಗೆ ತಾನು ಹಾಲು ಕೊಡುತ್ತಾ ಹಾಲು ಕೊಡುವ ಕಾಯಕವೇ ಕೈಲಾಸ ಎಂದು ಭಾವಿಸಿ ಸುಮ್ಮನಿರುವುದು ಅದರ ಸಜ್ಜನಿಕೆಯ ಲಕ್ಷಣ.

ಹಬ್ಬಹರಿದಿನಗಳೇ ಇರಲಿ ಅಥವಾ ಗೃಹಪ್ರವೇಶದಂತಹ ಕಾರ್ಯಕ್ರಮಗಳೇ ಇರಲಿ, ಎಲ್ಲರೂ ದನಗಳನ್ನು ಕರೆದು ಪೂಜಿಸುವವರೇ. ಆದರೆ ಎಮ್ಮೆಗಳನ್ನು ಕರೆದು ಅಷ್ಟೊಂದು ಸಂಭ್ರಮದಿಂದ ಮನೆ ಒಳಗೆ ತುಂಬಿಸಿಕೊಂಡು ಪೂಜಿಸುವುದನ್ನು ನಾನು ಎಲ್ಲಿಯೂ ನೋಡಿಲ್ಲ. ಕೆಲವು ರಾಜಕೀಯ ಪಕ್ಷಗಳಲ್ಲಿ ಏಕಮುಖವಾಗಿ ವ್ಯಕ್ತಿ ಪೂಜೆ ಮಾಡುವಂತೆ ದನಗಳನ್ನು ಪೂಜೆ